2. ಸದರಿ ಜಂಗಲಿಯನ್ನು ಸ್ಟೇಟು ಫಾರೆಸ್ಟ್ಟಾಗಿಮಾಡುವವರೆಗೆ ಮುಂಚೆ ಇಸ್ತಿಹಾರ್ನಾವು ಪ್ರಕಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಕಿರ್ದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀ ಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಕಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನು ಉಟುವಾಡುವಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು, ಸದರೀ ಜಮೀನಿನಲ್ಲಿ ಹೊಸ ವ್ಯವಸಾಯವನ್ನು ಕಟ್ಟುಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರೀಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟು ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ

(a) ಅತಿಕ್ರಮಪ್ರವೇಶ, ದನಕರುಗಳನ್ನು ಮೇಯಿಸುವದು, ದನಕರುಗಳನ್ನು ಸ್ಟೇಟು ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟು ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(d) ಇನೆ ಪ್ರಕರಣದ್ದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟು ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಭಾಗ್ಯಕ್ಕಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲೀ ಕಡಿಯುವದು, (ಕತರ್ಗಾಯಿಸುವದು) ಅವರ ಮಧ್ಯೆ ಸುತ್ತಲೂ ಫಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತ್ತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು,

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸ್ಥಾಪಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ಪತ್ತಿವದು.

4. ಈ ಪ್ರಕಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರುತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇಹೆ ಅಥವಾ ಉಂಟು ಏಂತ ಹೇಳುವದು, ಅಂಥಾ ಪ್ರತಿ ಬಂದು ಹಕ್ಕಿನ ಸ್ವಭಾವವನ್ನು ಹಕ್ಕುದಾರ ಎಷ್ಟರ ಮಟ್ಟಿಗೆ ಇಹೆ ಯನ್ನತಕ್ಕ ಅಂಥಾ ವ್ಯಾಪ್ತಿಯನ್ನು ನಕ್ಷೆಸಹಿತವಾಗಿ ಮಾಡಿ ಬರಹವ್ಯೂಹಪೂರ್ವಕವಾಗಲೀ, ಅಥವಾ ರೂಬ್ರೂಬಾಗಲಿ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರಿಗೆ ಬಲೀಯವಾಗಿರುವ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಅ. ಆನಂದರಾವ್,
ಮೈಸೂರು ಕೀಮೀದು ಫಾರೆಸ್ಟು ಸೆಟಲ್‌ಮೆಂಟ್ ಆಫಿಸರು.

ಕೋಲಾರ ಜಿಲ್ಲೆಗೆ.

ಇಸ್ತಿಹಾರ್ನಾವೆ.

ತಾರೀಖು 7ನೆ ಅಗಸ್ಟು 1904 ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿರುವ ಜಮೀನುಗಳಿಗೆ ಸಂಬಂಧಪಟ್ಟ ಹಕ್ಕುಗಳ ಬಗ್ಗೆ ವಿಚಾರಣೆ ಮಾಡಿ ತೀರ್ಮಾನಗೊಳಿಸಲಿಕ್ಕಾಗಿ, ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ 1904ನೆ ಇಸವಿ ಸಪ್ಟಂಬರ್ ತಾ|| 30ನೆ ತಾರೀಖಿನ ದಿವಸ ಬೆ ಹಾಜರಾಗುವಂತೆ ಹವಾಜು

1. ಜೋಡಿಸ್ಕೋಣಪ್ಪನಹಳ್ಳಿ (ಇನಾಮ್ದಾರ್ ಬಾಬ್ತು ಒಂದು ವ್ಯಕ್ತಿ ಮಾತ್ರ) } ಒಕ್ಕಲು ಹೋಬಳಿ—ಮಾಲೂರು ತಾ||
2. ಜೋಡಿ ಯರ್ರಂಗಪ್ಪ ... } ಹುತ್ತೂರು ಹೋಬಳಿ—ಕೋಲಾರ ತಾ||
3. ಜೋಡಿ ಚಾಪರಹಳ್ಳಿ }

ವ್ಯಾಕಿಸಲ್ಪಟ್ಟಷ್ಟೆಂದು ಇದರಿಂದ ಸೂಚಿಸಲ್ಪಟ್ಟಿದೆ.

(ಹಿಚ್ಚಿ ತಹಕೀಲ್ ಬ್ಯೂ 1901ನೆ ಆಗಸ್ಟು 18ನೆ ಪುಟ ನಂ 33ನೆ ನಂ೫೫ ಮೈಸೂರ ಗೆಜೆಟಿನ 2ನೆ ಭಾಗದ 489-490-491ನೆ ನಂಬರಿ ಪೇಜು ನೋಡತಕ್ಕದ್ದು.)

ಸೆಟಲ್ಮೆಂಟ್ ಆಫೀಸರ್,
ಡೆಪ್ಯುಟಿ ಕಮೀಷನರ್.

ತುಮಕೂರು ಡಿಸ್ಟ್ರಿಕ್ಟ್.

ಇಸ್ತಿಹಾರು.

ತುಮಕೂರು ತಾಲ್ಲೂಕಿನಲ್ಲಿ ಹೊಸದಾಗಿ ತಯಾರಾಗಿರುವ ಮಾನತ್ತೂರು ಕೆರೆ ಕೆಳಗಣ ಜಮೀನುಗಳನ್ನ ಪಡೆಯತಕ್ಕ ವಿಷಯದಲ್ಲಿ ಹೆಚ್ಚಾದ ವಿಷಯುಗಳಿಗೆ 1904ನೆ ಇಸವಿ ಆಗಸ್ಟು 11ನೆ ತಾರೀಖಿನ ಮೈಸೂರು ಗೆಜೆಟಿನ IIನೆ ಭಾಗದ 478ನೆ ಪುಟವನ್ನು ನೋಡಿ.

ಕೆ. ದೊರಸಾಮಿ ಅಯ್ಯರ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ಸ್ ೧೯೦೪ನೆ ಇಸವಿ ಜುಲೈ ತಾರೀಖು 28.

ಚಿಕ್ಕಮಗಳೂರು ತಾಲ್ಲೂಕು ಜಾಗರದ ಹೋಬಳಿ ಪಂಡ್ಯವಳ್ಳಿ ಗ್ರಾಮಕ್ಕೆ 1902-03 ಮತ್ತು 1903-1904ನೆ ಸಾಲಿಗೆ ಚಿಕ್ಕ ಮುದ್ದಯ್ಯ ದೊಡ್ಡ ಮುದ್ದಯ್ಯ ಇವರಿಂದ ಬರಬೇಕಾದ ಕಂದಾಯ ಬಾಕಿಗಾಗಿ ಸದರೀ ಗ್ರಾಮದ ಕಾಫಿ ಸರ್ವೆ ನಂ. 9-116 ಮತ್ತು 55 ಗಳನ್ನು ಚಿಕ್ಕಮಗಳೂರು ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂಬರೂ ಸ್ ೧೯೦೪ನೆ ಇಸವಿ ಅಕ್ಟೋಬರು ತಾರೀಖು 5ನೆ ದಿವಿ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಇನ್ನೂ ಜಾಸ್ತಿ ತಪಶೀಲು ತಿಳಿಯಬೇಕಾದವರು ಇದರ ಹಿಂದಿನವಾರದ ಗೆಜೆಟ್ಟಿನಲ್ಲಿ ಛಾಯಿಷ್ ಆಗಿರುವದನ್ನು ನೋಡಿದರೆ ತಿಳಿದುಬರುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೪—೧೯೦೫ನೆ ಇಸವಿ ಅರ್ಜೀ ನಂಬರ್ 24.

ಮೃತಪಟ್ಟ ವೆಂಕಟೇಶಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಹುಣಸೂರು ತಾಲ್ಲೂಕು ಪಿರ್ಯಾಪಟ್ಟಣದಲ್ಲಿರುವ ಸುಬ್ಬುವಧಾನಿಗಳ ವೆಂಕಟೇಶಯ್ಯನವರ ಮಗ ಸುಬ್ರಾಯರು, ಮೃತಪಟ್ಟ ಸದರೀ ವೆಂಕಟೇಶಯ್ಯನವರಿಗೆ ವಂಗ ಆಗಬೇಕೆಂಬ ಹಕ್ಕುದಾರಿ ಮೇಲೆ ಪಿರ್ಯಾಪಟ್ಟಣದ ವಾಸಸ್ಥರಾಗಿ, ಮೃತಪಟ್ಟ ವೆಂಕಟೇಶಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲಿ ಮಾಡುವದಕ್ಕೆ ಸ್ ೧೯೦೧ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಛಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ ೧೯೦೪ನೆ ಇಸವಿ ಸಪ್ಟಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವಾರ್ಜಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟೇಶಯ್ಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೪ನೆ ಇಸವಿ ಆಗಸ್ಟು ತಿಂಗಳು 15ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೪—೧೯೦೫ನೆ ಇಸವಿ ಅರ್ಜೀ ನಂಬರ್ 86.

ಮೃತಪಟ್ಟ ಮಾಸ್ತೆಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಂಜನಗೂಡು ತಾಲ್ಲೂಕು ಕಳಲೆಯಲ್ಲಿರುವ ಅರಪರಳು ಚಿಕ್ಕನಾಯಿಕನ ಮಗಳು ರಂಗಮ್ಮ, ಮೃತಪಟ್ಟ ಸದರೀ ಮಾಸ್ತೆಮ್ಮನಿಗೆ ಅಕ್ಕ ಆಗಬೇಕೆಂಬ ಹಕ್ಕುದಾರಿಯ ಮೇಲೆ ಕಳಲೆ ವಾಸಸ್ಥರಾಗಿ ಮೃತಪಟ್ಟ ಮಾಸ್ತೆಮ್ಮನ ಜೆಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೯೦೧ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಛಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ ೧೯೦೪ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವಾರ್ಜಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಾಸ್ತೆಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೪ನೆ ಇಸವಿ ಆಗಸ್ಟು ತಿಂಗಳು 17ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.